(SRI N. CHIKKE GOWDA)

(e) Suitable action is being taken in exercise of the powers of conferred under Fertiliser Control Order, as amended by Govenment Order No. AF 70 AFT 72 dated 16-8-1973 against the Manufacturers, dealers and distributors to prevent the irregular transactions.

ಶ್ರೀ ಕೆ. ಹೆಚ್. ಹನುಮೇಗೌಡ.— ಸ್ವಾಮಿ, ದಕ್ಷಿಣಕನ್ನಡ ಮತ್ತು ಹಾಸನ ಜಿಲ್ಲೆಯಿಂದ ರಾಸಾಯನಿಕ ಗೊಬ್ಬರ ಯಥೇಚ್ಚವಾಗಿ ಮಂಡ್ಯ ಜಿಲ್ಲೆ ಕಡೆಗೆ ಕಳ್ಳಸಾಗಾಣಿಕೆಯಲ್ಲಿ ಹೋಗುತ್ತಿದೆ ಎಂದು ಪೋಲೀಸಿನವರಿಗೆ ತಿಳಿಸಿದರೆ, ಅವರು ಡಿಸ್ಟ್ರಿಕ್ಟ್ ಮೂವ್‌ಮೆಂಟ್ ಕಂಟ್ರೋಲ್ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಾರೆ. ಯಾವ ಹಂತದಲ್ಲಿ ಪೋಲೀಸಿನವರು ಈ ತರಹ ಅಕ್ರಮ ರಾಸಾಯನಿಕ ಗೊಬ್ಬರ ಸಾಗಿಸುವ ಲಾರಿಗಳನ್ನು ಹಿಡಿಯಬಹುದು ?

† ಶ್ರೀ ಎನ್. ಚಿಕ್ಕೇಗೌಡ.— ಫರ್ಟಿಲೈಸರ ಕಂಟ್ರೋಲ್ ಆರ್ಡರ್ ಪ್ರಕಾರ ಎಲ್ಲೇ ಆಗಲೀ ಗೊಬ್ಬರವನ್ನು ರಹದಾರಿ ಅಥವಾ ಅಧಿಕೃತ ದಾಖಲೆ ಇಲ್ಲದೆ ಸಾಗಾಣಿಕೆ ಮಾಡಿದರೆ, ಅವರ ಮೇಲೆ ಎಸ್ಸೆನ್ಷಿಯಲ್ ಕಮಡಿಟೀಸ್ ಆಕ್ಟ್ ಪ್ರಕಾರ ಕ್ರಮ ತೆಗೆದುಕೊಳ್ಳಬಹುದು. ಅಂತರ ಜಿಲ್ಲಾ ಸಾಗಾಣಿಕೆ ನಿರ್ಬಂಧ ಗೊಳಿಸಲಾಗಿದೆ. ರೈತರು ರಹದಾರಿ ಇಲ್ಲದೇ ಸಾಗಿಸುವ ಬಗ್ಗೆ ಕ್ರಮ ತೆಗೆದುಕೊಳ್ಳಲು ಕಾನೂನಿನಲ್ಲಿ ಅಳವಡಿಸಲಾಗಿದೆ.

ಶ್ರೀ ಕೆ ಹೆಚ್. ಹನುಮೇಗೌಡ.— ಲಾರಿಯಲ್ಲಿ ರಾಸಾಯನಿಕ ಗೊಬ್ಬರವನ್ನು ಕಳ್ಳಸಾಗಾಣಿ ಕೆಯಿಂದ ಸಾಗಿಸುವಾಗ ಪೋಲೀಸರು ಲಾರಿಯನ್ನು ಹಿಡಿದು ಬಿಟ್ಟರೆ, ಲಾರಿ ಮಾಲಿಕರು ನಮಗೆ ಆ ವಿಚಾರ ಗೊತ್ತಿಲ್ಲ ಎಂದು ಸ್ಟೇಟ್‌ಮೆಂಟ್ ಕೊಟ್ಟು ಈ ತರಹ ತಪ್ಪಿಸಿ ಕೊಳ್ಳುತ್ತಾರೆ, ಲಾರಿ ಓನರ್ಸ್ ಜವಾಬ್ದಾರಿ ಬರುವುದಿಲ್ಲ, ಪೋಲೀಸರು ಬರೀ ಗೊಬ್ಬರ ಮಾತ್ರ ಕನ್‌ಫಿಸಿಕೇಟ್ ಮಾಡಿಕೊತ್ತಾರೆ ಲಕ್ಷಾಂತರ ರೂಪಾಯಿ ದುಡಿಯುವ ವರ್ತಕರು ಹೋದರೆ ಹೋಗಲಿ ಎಂದು ತಮ್ಮ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುತ್ತಾರೆ, ಲಾರಿ ಓನರ್ಸ್ ಇನ್‌ವಾಲ್ವ್ ಮಾಡಿ ಲಾರಿ ಕಾನ್‌ಫಿಸ್ಕೇಟ್ ಮಾಡಿಕೊಳ್ಳುವುದಕ್ಕೆ ಏನಾದರೂ ಕಾನೂನು ತರುವುದಕ್ಕೆ ಸಾಧ್ಯವಾಗುತ್ತದೆಯೇ ?

ಶ್ರೀ ಎನ್. ಚಿಕ್ಕೇಗೌಡ.— ಸರ್ವೇಸಾಧಾರಣವಾಗಿ ವಾಹನದಲ್ಲಿ ಇರತಕ್ಕ ಡ್ರೈವರ್ಸ್ ಮತ್ತು ಕ್ಲೀನರ್ಸ್ ಆ ರೀತಿ ಹೇಳುವುದು ಸ್ವಾಭಾವಿಕ. ಸರ್ಕಾರದವರು ಅವರ ಮೇಲೆ ಕೇಸ್ ರಿಜಿಸ್ಟರ್ ಮಾಡಿ ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಎ.ಬಿ ರಾಮಸ್ವಾಮಿ— ಫರ್ಟಿಲೈಸರ್ಸ್ ಸೀಸ್ ಮಾಡಿದ ಮೇಲೆ ಅದನ್ನು ಕಾನ್‌ಫಿಸ್ಕೇಟ್ ಮಾಡಿ ಕ್ರಮ ಮಾಡುತ್ತೀರಾ ?

ಶ್ರೀ ಎನ್. ಚಿಕ್ಕೇಗೌಡ.—ಪೋಲೀಸರು ಮಾಲು ಸೀಸ್ ಮಾಡಿ ಕೇಸ್ ರಿಜಿಸ್ಟರ್ ಮಾಡುತ್ತಾರೆ. ಮುಂದಿನ ಕ್ರಮ ಕೋರ್ಟ್ ವ್ಯವಹಾರದಲ್ಲಿ ತೊಡಕಾಗತಕ್ಕದ್ದು.

ಶ್ರೀ ಕೆ. ಹೆಚ್ ಹನುಮೇಗೌಡ.— ಈ ರೀತಿ ರಾಸಾಯನಿಕ ಗೊಬ್ಬರ ಅಕ್ರಮ ಸಾಗಾಣಿಕೆ ಪೋಲೀಸರಿಗೆ ಸಿಕ್ಕಿದರೆ ಕೇಸ್ ಹಾಕುತ್ತಾರೆ. ಅಗ್ರಿಕಲ್ಚರ್ ಇಲಾಖೆ ಇದರ ಬಗ್ಗೆ ಏನು ಕ್ರಮ ತೆಗೆದು ಕೊಳ್ಳಬಹುದು. ?

ಶ್ರೀ ಎನ್. ಚಿಕ್ಕೇಗೌಡ.— ಜಿಲ್ಲೆಯಲ್ಲಿರತಕ್ಕ ಪ್ರತಿ ಡೆಪ್ಯೂಟಿ ಡೈರೆಕ್ಟರ್, ಸಬ್‌ಡಿವಿಜನ್ ಆಫೀಸ್ಟೆಂಟ್ ಡೈರೆಕ್ಟರ್, ಜಿಲ್ಲಾ ಅಗ್ರಿಕಲ್ಚರ್ ಆಫೀಸರ್ ಮತ್ತು ಫರ್ಟಿಲೈಸರ್ಸ್ ಸಂಬಂಧಪಟ್ಟ ಅಧಿಕಾರಿಗಳು, ಪೋಲೀಸರು ತೆಗೆದುಕೊಳ್ಳವ ರೀತಿಯಲ್ಲಿ ಕ್ರಮ ತೆಗೆದುಕೊಂಡು ಅವರಿಗೆ ಹಾಂಡ್ ಪವರ್ ಮಾಡುವ ಅಧಿಕಾರಿ ಕೊಟ್ಟಿದ್ದೇವೆ.

* *Sale of Chemical Fertilisers to Agriculturists at enhanced rates*

(224) Sri S. M. Sheernaly Chandrasekhar (Hosanagar).—

Will the Minister for Agriculture and Animal Husbanday be pleased to state.—

(*a*) whether the Government is aware of sudden increase in price of Chemical Fertilisers in the State;

(*b*) whether the Government is aware that the dealers were in possession of big stock of fertilisers when the rates were enhanced ;

(*c*) whether the Government is aware that all these dealers have sold these fertilisers to the Agriculturists at enhanced rates:

(*d*) the action the Government intend to take to sell the fertilisers to the agriculturists at reasonable rate ?

Sri N. Chikke Gowda (Minister for Agriculture and Animal Husbandry).—

(*a*) Yes.

(*b*) Several dealers had several extents of stocks.

(*c*) It is possible that some sales have been at enhanced rates.

(*d*) The State Government has no powers to give directions to the dealers to sell the fertilisers at any prices. The State Government have powers to see that the dealers do not sell fertilisers at prices higher than the ceiling prices fixed by the Government of India.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಸ್ವಾಮಿ, ತಾವು ಉತ್ತರದಲ್ಲಿ ವಿವಿಧ ಪ್ರಮಾಣದ ದಾಸ್ತಾನು ಇತ್ತು ಎಂದು ಹೇಳಿದ್ದೀರಿ. ರೇಟ್ ಹೆಚ್ಚು ಆಗುವ ವಿಚಾರ ಪೂರ್ವ ಭಾವಿಯಾಗಿ ಗೊತ್ತಿರಲಿಲ್ಲವೇ ? ಇದನ್ನು ತಪ್ಪಿಸುವ ಬಗ್ಗೆ ಕಾರ್ಯಕ್ರಮ ಕೈಗೊಳ್ಳುವುದಕ್ಕೆ ಆಗುತ್ತಾ ಇರಲಿಲ್ಲವೇ ?

† ಶ್ರೀ ಎನ್. ಚಿಕ್ಕೇಗೌಡ — ನಾನು ಸದನದಲ್ಲಿ ಬಂಗಿಯವರ ಪ್ರಶ್ನೆಗೆ ಉತ್ತರ ಹೇಳಿದ್ದೇನೆ. ರೇಟನ್ನು ಹೆಚ್ಚಿಸತಕ್ಕ ಬಗ್ಗೆ ಪೂರ್ವಭಾವಿಯಾಗಿ ಕೇಂದ್ರ ಸರ್ಕಾರದವರು ಯಾವ ಮಾಹಿತಿ ಕೊಟ್ಟಿರಲಿಲ್ಲ. ಸಮಾಚಾರವನ್ನು ಒದಗಿಸಿರಲಿಲ್ಲ. ಅವರು ತಮಗೆ ಫರ್ಟಿಲೈಸರ್ ಕಂಟ್ರೋಲ್ ಆರ್ಡರ್‌ನಲ್ಲಿ ಇರತಕ್ಕ ಅಧಿಕಾರವನ್ನು ಚಲಾಯಿಸಿ ಗೊಬ್ಬರಗಳ ಬೆಲೆಯನ್ನು ಹೆಚ್ಚಿಸಿರತಕ್ಕದ್ದು.

ಶ್ರೀ ಎಸ್. ಎಂ. ಶೀರನಾಳಿ ಚಂದ್ರ ಶೇಖರ್. — ಕೆಲವು ದಾಸ್ತಾನುಗಾರರು ಲಕ್ಷಗಟ್ಟಲೆ ದುಡಿಯುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಚಿಕ್ಕೇಗೌಡ.— ಕೆಲವು ಪ್ರೈವೇಟ ಡೀಲರ್ಸ್, ಅವರಲ್ಲಿ ಇರತಕ್ಕ ದಾಸ್ತಾನು ತಿಳಿದು ಕೊಂಡಿದ್ದೇವೆ. ಅವರಲ್ಲಿ ಇರತಕ್ಕ ದಾಸ್ತಾನು ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕು ಎಂದು ಸಾರ್ವಜನಿಕ ಹಿತದೃಷ್ಟಿಯಲ್ಲಿ ಗಮನಿಸಿದ್ದೇವೆ. ಅದನ್ನು ಸದನದಲ್ಲಿ ಬಹಿರಂಗವಾಗಿ ಹೇಳುವುದಕ್ಕೆ ಇಚ್ಛೆಪಡುವುದಿಲ್ಲ. ಅವರು ಹೆಚ್ಚು ಲಾಭವನ್ನು ಪಡೆದಿದ್ದಾರೆ, ಆ ಲಾಭದ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡಿದ್ದೇವೆ.

ಶ್ರೀ ಕೆ. ಎನ್. ವೀರಪ್ಪಗೌಡ.— ಗೊಬ್ಬರದ ರೇಟ್ ಜಾಸ್ತಿ ಮಾಡಿದಾಗ ಕೇಂದ್ರ ಸರ್ಕಾರ ಹೇಳಿರತಕ್ಕದ್ದು ಸಬಸೀಡಿ ಏನುಕೊಡುತ್ತಾ ಇದ್ದಾರೆ ಅದನ್ನು ನಿಲ್ಲಿಸಿಬಿಡುತ್ತಾರೆ ಎಂದು, ಮತ್ತೆ ರೇಟ್ ಎಷ್ಟು ಆಗುತ್ತದೆ ಎಂದು ಹೇಳುತ್ತಾರೆಂದು ತಿಳಿದುಕೊಂಡಿದ್ದೇವೆ. ಎಲ್ಲಿ ಗೊಬ್ಬರ ಸಪ್ಲೈ ಆಗುತ್ತಿತ್ತು ಅದಕ್ಕೆ ಕೇಂದ್ರ ಸರ್ಕಾರ ಸಬ್ಸಿಡಿ ಆಗಲೇ ಪಾವತಿ ಆಗಿರಲಿಲ್ಲವೇ ? ಹಾಗೆ ಪಾವತಿ ಆಗಿರುವ ಕಾಲದಲ್ಲಿ ಖಾಸಗೀಯವರ ಹತ್ತಿರ ಇರುವ ಸಾಮಾನು ಹಳೇ ರೇಟಿಗೆ ಮಾರಾಟ ಮಾಡಬೇಕು. ಇಲ್ಲದೇಹೋದರೆ ಹಿಂದೆ ಕೊಟ್ಟ ಸಬ್ಸಿಡಿಯನ್ನು ಸರ್ಕಾರಕ್ಕೆ ವಾಪಸ್ಸು ಕೋಡಬೇಕು ಎಂದು ಕೇಳುವುದಕ್ಕೆ ಅಧಿಕಾರ ಇರಲಿಲ್ಲವೇ ?

ಶ್ರೀ ಎನ್. ಚಿಕ್ಕೇಗೌಡ.—ಕೆಂದ್ರ ಸರ್ಕಾರದವರು ಪರಮಾವಧಿ ಬೆಲೆ ನಿಗಧಿ ಮಾಡಿದ ಮೇಲೆ ಶಾಸಗೀಯವರು ಕಡಿಮೆ ಬೆಲೆಗೆ ವಾಗಾಟ ಮಾಡಬೇಕು ಎನ್ನುವ ಹಕ್ಕು ರಾಜ್ಯ ಸರ್ಕಾರಕ್ಕೆ ಇರಲಿಲ್ಲ. ಮತ್ತು ಈ ರೀತಿ ಹೇಳಿದ್ದನ್ನು ಕೆಲವು ರಾಜ್ಯಗಳಲ್ಲಿ ಅವರು ಕೊರ್ಟುಗಳಿಗೆ ಹೋಗಿ, ಕಾನೂನು ಬಾಹಿರ ಪ್ರಶ್ನೆ ಎತ್ತಿದರು. ಮತ್ತು ಖಾಸಗೀಯವರಿಗೆ ಕೇಂದ್ರ ಸರ್ಕಾರದವರು ಪರಮಾವಧಿ ಬೆಲೆ ಏನು ನಿಗಧಿ ಮಾಡಿದ್ದಾರೆ ಅದಕ್ಕಿಂತ ಕಡಿಮೆ ಬೆಲೆಗೆ ವಾಗಾರಿ ಎಂದು ಹೇಳಕ್ಕೆ ಕೆಂದ್ರ ಸರ್ಕಾರಕ್ಕೆ ಇಲ್ಲ ನಿಗಧಿ ಮಾಡಿದ ಪರಮಾವಧಿ ಬೆಲೆಗಿಂತ ಹೆಚ್ಚು ಬೆಲೆಗೆ ಮಾರಿದರೆ ಫರ್ಟಿಲೈಸರ್ ಕಂಟ್ರೋಲ್ ಆರ್ಡರ್ ಪ್ರಕಾರ ಅವರ ಮೇಲೆ ಕ್ರಮ ಕೈಗೊಳ್ಳಲು ರಾಜ್ಯ ಸರ್ಕಾರಕ್ಕೆ ಅಧಿಕಾರ ಇದೆ.

ಶ್ರೀ ಎಂ. ಬಿ. ರಾಮುಸ್ವಾಮಿ — ಕಳೆದ ವರ್ಷದಿಂದ ಗೊಬ್ಬರದ ಬೆಲೆಯನ್ನು ಎಷ್ಟು ಸಾರಿ ಈ ರೀತಿ ಹೆಚ್ಚು ಮಾಡಿದ್ದಾರೆ ಎಂದು ಹೇಳುತ್ತೀರಾ ?

ಶ್ರೀ ಎನ್. ಚಿಕ್ಕೇಗೌಡ — ೧೯೫೦ ರಿಂದ ನಾಲ್ಕಾರು ಸಾರಿ ಹೆಚ್ಚಿಸಿದ್ದಾರೆ ಎಂದು ನನಗೆ ತಿಳಿದಂಥ ಅಭಿಪ್ರಾಯ. ಬೇರೆ ಪ್ರಶ್ನೆ ಕೇಳಿದರೆ ಯಾವ ಯಾವ ವರ್ಷದಲ್ಲಿ ಎಷ್ಟೆಷ್ಟು ಹೆಚ್ಚಿಸಿದ್ದಾರೆಂದು ಹೇಳುತ್ತೇನೆ ಈಗ ಆ ಮಾಹಿತಿ ನನ್ನಲ್ಲಿ ಇಲ್ಲ. ವಿಚಾರಿಸಿ ಹೇಳುತ್ತೇನೆ.

ಶ್ರೀ ಹೆಚ್. ಜಿ ಚನ್ನಪ್ಪ.— ಗೊಬ್ಬರದ ಧಾರಣೆಯನ್ನು ಇಷ್ಟು ಹೆಚ್ಚು ಮಾಡಿರುವುದರಿಂದ ಇದನ್ನು ಬಿಡ ರೈತರು ಉಪಯೋಗಿಸಲು ಅವರಿಗೆ ಶಕ್ತಿ ಇಲ್ಲವೆನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಸರ್ಕಾರ ಏಕೆ ಇಷ್ಟು ಹೆಚ್ಚು ಬೆಲೆ ಏರಿಸುವುದಕ್ಕೆ ಬದಲಾಗಿ ಹಂತ ಹಂತವಾಗಿ ಹೆಚ್ಚು ಮಾಡಿದ್ದರೆ ಇದನ್ನು ಜನರೂ ಸರಿಯಾಗಿ ಉಪಯೋಗಿಸಲು ಸಾಧ್ಯವಾಗುತ್ತಿರಲಿಲ್ಲವೇನೆ?

ಶ್ರೀ ಎನ್. ಚಿಕ್ಕೇಗೌಡ.—ನಾನು ಈಗಾಲೇ ಮಾನ್ಯ ಸದನದಲ್ಲಿ ಇವರ ಬಗ್ಗೆ ಸ್ಪಷ್ಟವಾಗಿ ಹೇಳಿದ್ದೇನೆ ಗೊಬ್ಬರದ ಬೆಲೆಯನ್ನು ನಾವು ಒಂದೇ ರಾಜ್ಯದಲ್ಲಿ ಏರಿಸಿಲ್ಲ. ಅಂತಹ ರಾಜ್ಯದ ವಾರು ಕಟ್ಟೆಯ ನಿಯಮದ ಪ್ರಕಾರ ಬೆಲೆಗಳನ್ನು ನಿರ್ಧರಿಸುತ್ತಿದ್ದಾರೆ. ಯಾವಗ ನ್ಯಾಫ್ತಾ ಬೆಲೆ ಹೆಚ್ಚು ಮಾಡಿದರೋ ಆಗಿನಿಂದಲೇ ಗೊಬ್ಬರದ ಬೆಲೆ ಹೆಚ್ಚು ಆಗಲು ಅವಕಾಶವಾಯಿತು. ಹೀಗೆ ಮಾಡುವುದು ಎಲ್ಲ ರಾಜ್ಯಗಳಿಗೂ ಆ ವಾರ್ಯವಾದುದರಿಂದ ಈ ರೀತಿ ಗೊಬ್ಬರದ ಬೆಲೆ ಹೆಚ್ಚಾಯಿತು ಮತ್ತು ಹೀಗೆ ವ್ಯವಸಾಯೋಪಕರಣಗಳ ಬೆಲೆಗಳೂ ಹೆಚ್ಚಾದವು.

ಶ್ರೀ ಎಂ. ಬಿ. ರಾಮುಸ್ವಾಮಿ.—(೩)ಗೆ ಉತ್ತರವಾಗಿ ಸರಕಾರಕ್ಕೆ ಯಾವ ಹತೋಟಿಯೂ ಇರಲಿಲ್ಲ ಎಂದು ಹೇಳುತ್ತೀರಿ. ಅಂದರೆ ಕೇಂದ್ರ ಸರಕಾರದವರಿಗೆ ತಿಳಿಸಿ ಈ ರೀತಿ ಬೆಲೆ ಏರಿಸುವುದು ಸರಿಯಲ್ಲ ಎಂದು ಸರಕಾರ ಏಕೆ ಸಲಹೆ ಮಾಡಬಾರದು ?

ಶ್ರೀ ಎನ್. ಚಿಕ್ಕೇಗೌಡ. — ಪ್ರೈವೇಟ್ ಡೀಲರುಗಳ ಬಗ್ಗೆ ಯಾವ ಹತೋಟಿಯೂ ಇರಲಿಲ್ಲ ಎಂದು ಹೇಳಲಿಲ್ಲ. ಬೆಲೆ ವಿಚಾರದಲ್ಲಿ ನಾವು ಯಾವ ಹತೋಟಿಯನ್ನೂ ಅವರ ಮೇಲೆ ಇಟ್ಟುಕೊಳ್ಳಲು ನಮಗೆ ಅಧಿಕಾರವಿಲ್ಲ.

ಶ್ರೀ ಕೆ. ಎನ್. ವೀರಪ್ಪಗೌಡ. — ನಾನು ಈ ಮೊದಲೇ ಹೇಳಿದ್ದೆ. ಕೇಂದ್ರ ಸರ್ಕಾರದವರು ಗೊಬ್ಬರವನ್ನು ಸಬ್‌ಸಿಡೈಸ್ ರೇಟಿನಲ್ಲಿ ಒದಗಿಸುತ್ತಿರುವುದರಿಂದ ಅವರಿಗೆ ಹೆಚ್ಚು ಬೆಲೆ ಮೇಲೆ ವಾರು ವುದನ್ನು ವಿತೆಡ್ರಾ ಮಾಡಬಹುದಾಗಿತ್ತು. ಕೇಂದ್ರ ಸರ್ಕಾರ ಸಬ್‌ಸಿಡೈಸ್ ಮಾಡಿರುವುದರಿಂದ ಇದನ್ನು ವಾಪಸ್ ತೆಗೆದುಕೊಳ್ಳಬೇಕಾದರೆ ಕೇಂದ್ರ ಸರಕಾರದವರ ಸಲಹೆ ಮೇರೆ ಮಾಡಬೇಕಾಗುತ್ತದೆ. ಇಷ್ಟು ಹೆಚ್ಚು ಬೆಲೆಯನ್ನು ಖಾಸಗಿಯವರು ಕೊಡಬೇಕೆಂದು ಹೇಳುವುದು ಸರಿಯಲ್ಲ ಅಲ್ಲವೇ ?

ಶ್ರೀ ಎನ್. ಚಿಕ್ಕೇಗೌಡ.— ಕೇಂದ್ರ ಸರ್ಕಾರ ಬೆಲೆಗಳನ್ನು ಹೆಚ್ಚಿಸುವಾಗ ಇದನ್ನು ಸಬ್‌ಸಿಡೈಸು ಮಾಡಿರುವುದರ ಬಗ್ಗೆ ಯಾವ ಒಂದು ವಿಚಾರವನ್ನು ಎತ್ತಲಿಲ್ಲ. ಕೇಂದ್ರ ಸರಕಾರದವರು ಸಬ್‌ಸಿಡೈಸು ಮಾಡಿರುವ ಬಗ್ಗೆ ಯಾವ ಮಾತುಗಳನ್ನೂ ರಾಜ್ಯ ಸರಕಾರಕ್ಕೆ ಹೇಳಿರುವುದು ನಮಗೆ ಗೊತ್ತಿಲ್ಲ.

ಶ್ರೀ ಎಸ್. ಎಂ ಶೀರನಾಳಿ ಚಾಂದ್ರಶೇಖರ್.— ಬಡ ರೈತರಿಗೆ ಈ ರೀತಿ ಗೊಬ್ಬರದ ಬೆಲೆಗಳನ್ನು ಜಾಸ್ತಿ ಮಾಡಿರುವುದರಿಂದ ಬಹಳ ಅನಾನುಕೂಲಗಳಾಗಿವೆ. ಆದುದರಿಂದ ಇಂತಹ ಸಾಮಾನ್ಯವಾದ ಬಡ ಜನರಿಗೆ ಏನಾದರೂ ಪರಿಹಾರ ಕೊಡುವುದರ ಬಗ್ಗೆ ಸರಕಾರ ಯೋಚಿಸುತ್ತಿದೆಯೇ ?

ಶ್ರೀ ಎನ್. ಚಿಕ್ಕೇಗೌಡ.— ಪರಿಹಾರ ಕೊಡುವ ಪ್ರಶ್ನೆಯೇ ಇದರಲ್ಲಿಲ್ಲ. ಎಲ್ಲ ಪದಾರ್ಥಗಳ ಬೆಲೆ ಏರಿದಂತೆ ಇದೂ ಕೂಡ ಜಾಸ್ತಿಯಾಗಿದೆ. ಉದಾಹರಣೆಯಾಗಿ ಹೇಳುವುದಾದರೆ ಪೆಟ್ರೋಲ್ ದರವನ್ನು

ಜಾಸ್ತಿ ಮಾಡಿದರು. ಇದನ್ನು ಬಳಕೆ ಮಾಡುವವರು ಅನುಸರಿಸಿಕೊಂಡು ಹೊಗುತ್ತಿದ್ದಾರೆ. ಇವರಿಗೆ ಯಾವ ಪರಿಹಾರವನ್ನೂ ಕೊಡಲಿಲ್ಲ. ನಾವು ಖಿನೇ ಮೇ ೧೯೭೪ ರಂದು ಪ್ರೈವೇಟು ಡೀಲರುಗಳಲ್ಲಿ ಎಷ್ಟು ಸ್ಟಾಕು ಇತ್ತು ಎಂದು ಅವರಿಂದ ಕೇಳಿ ಡಿಕ್ಲರೇಷನ್ ತೆಗೆದುಕೊಂಡಿದ್ದೇವೆ. ಇದಕ್ಕೆ ವಿರೋಧವಾಗಿ, ಡಿಕ್ಲರೇಷನ್ ಕೊಡದೇ ಇದ್ದರೆ, ಅವರ ಮೇಲೆ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ ಎನ್ನುವುದನ್ನು ಇಲ್ಲಿ ಸ್ಪಷ್ಟವಾಗಿ ತಿಳಿಸಿದ್ದೇನೆ

* *Revenue Deposits Collected by D.E.O., Hassan*

(27) Sri K. H. Hanume Gowda (Hassan).—

Will the Minister for Education be pleased to state.—

(*a*) whether **it is not a fact that educational officers of Hassan District are deducting Rs. 5 P M. as Revenne deposit from the salaries of primary teachers from May, 1973 to May, 1974 ;**

(*b*) **if so, the amount deducted and the months in which it is so deducted ;**

(*c*) **the names of Post Offices and the dat s on which deducted amount has been deposited ;**

(*d*) whether **any fine has been remitted due to dela ed remittance to the revenue department ;**

(*e*) **if so, the amount of fine and the d tes on which it was remitted ;**

(*f*) **the reasons for remitting such fine ;**

(*g*) **the action taken by the Government against the officers who have remitted such fine ;**

(*h*) **the number of persons who have paid this fine amount ?**

Sri M. Mallikarjuna Swamy (Minister for Education).—

(*a*) **No.**

(*b*) **to (*h*) Do not arise in view re ly furnished above.**

ಶ್ರೀ ಕೆ. ಹೆಚ್. ಹನುಮೇಗೌಡ.—ಪ್ರಶ್ನೆಯನ್ನು ನಾನು ಕಳುಹಿಸಿದಾಗ ಆರ್. ಡಿ. ಗ್ರಾಂಟು ಎಂದು ವಿದ್ಯಾ ಇಲಾಖೆಯ ಬಗ್ಗೆ ಕೇಳಿದ್ದೇನೆ. ಆದರೆ ಇಲ್ಲಿ ರೆವೆನ್ಯೂ ಡಿಪಾರ್ಟು ಗಳ ಬಗ್ಗೆ ಉತ್ತರ ತರಿಸಿದ್ದಾರೆ. ಇದಕ್ಕಾಗಿ ಮಾನ್ಯ ಅಧ್ಯಕ್ಷರು ಈ ಪ್ರಶ್ನೆಯನ್ನು ಮುಂದೂಡಿ ಸರಿಯಾದ ಉತ್ತರ ಬರಲಂ ಅವಕಾಶ ಮಾಡಿಕೊಡಬೇಕೆಂದು ಕೇಳುತ್ತೇನೆ.

† **ಶ್ರೀಮತಿ ಇ. ಇ. ವಾಜ್.**—ಮಾನ್ಯ ಸದಸ್ಯರು ಇಲ್ಲಿರುವ ಉತ್ತರ ತಪ್ಪು ಎಂದ ಹೇಳುತ್ತಾರೆ. ಇದರ ಬಗ್ಗೆ ಬೇರೆ ಪ್ರಶ್ನೆ ಕೇಳುವ ಅಗತ್ಯವೂ ಇಲ್ಲ. ನಾನು ಮಾನ್ಯ ಸದಸ್ಯರಿಗೆ ಹೇಳುವುದು ಆರ್. ಡಿ. ಗ್ರಾಂಟು ಬಗ್ಗೆ ನಾವು ತನಿಕೆ ಮಾಡುತ್ತಿದ್ದೇವೆ ಮತ್ತು ಈಗಾಗಲೇ ಕೆಲವರನ್ನು ಸಸ್ಪೆಂಡ್ ಮಾಡಲಾಗಿದೆ ಇದರ ಬಗ್ಗೆ ಇನ್ನೂ ತನಿಖೆ ಆಗುತ್ತಿದೆ. ಇವೆಲ್ಲಾ ಆದ ನಂತರ ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತೇನೆ ತಪ್ಪು ಮಾಡಿರುವವರನ್ನು ಕಂಡುಹಿಡಿಯಬೇಕಾಗಿದೆ. ತಪ್ಪಿತಸ್ಥರು ಯಾರಿ ಇದ್ದಾರೋ ಅವರ ಮೇಲೆ ಖಂಡಿತ ಸೂಕ್ತವಾದ ಕ್ರಮ ತೆಗೆದುಕೊಳ್ಳುವುದರಲ್ಲಿ ಸರಕಾರ ಯಾಪತ್ತಿಗೂ ಹಿಂಜರಿಯುವುದಿಲ್ಲ ಎಂದು ಇಷ್ಟು ಮಾತ್ರ ಇಲ್ಲಿ ಹೇಳುತ್ತೇನೆ.

**Parity in Standard of Education with that of other States*